ಕರ್ನಾಟಕ ಸರ್ಕಾರ
ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
Email Id: commissioner.pue @gmail.com Phone No: 080-23562033

ಸಂಖ್ಯೆ:ಪಪೂಶಿಇ/ಆ.ವಿ-3/ವಿ.ನಿ-5/ಉ.ವರ್ಗಾ/2022-23 ದಿನಾಂಕ: 12-08-2022.

# ಜ್ಞಾಪನ

**ವಿಷಯ:-** 2022-23ನೇ ಶೈಕ್ಷಣಿಕ ಸಾಲಿನಲ್ಲಿ ನಡೆಸಲಾದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ **ಆದ್ಯತೆ ಹಾಗೂ ಕೋರಿಕೆ ವರ್ಗಾವಣೆ** ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲಾದ ಉಪನ್ಯಾಸಕರುಗಳಿಗೆ ವರ್ಗಾಯಿಸಿ ಸ್ಥಳನಿಯುಕ್ತಿ ಆದೇಶ ಹೊರಡಿಸುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 12 ಶಾಸನ 2020, ದಿನಾಂಕ: 27-03-2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 47 ಶಾಸನ 2021, ದಿನಾಂಕ: 18-01-2022.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ:12-05-2022.
4. ಈ ಕಚೇರಿ ಸಮಸಂಖ್ಯೆ ವರ್ಗಾವಣಾ ಮಾರ್ಗಸೂಚಿ ದಿನಾಂಕ:18-05-2022.
5. ಈ ಕಚೇರಿ ಸಮಸಂಖ್ಯೆ ಜ್ಞಾಪನ ದಿನಾಂಕ: 20-07-2022.
6. ಈ ಕಚೇರಿ ಸಮಸಂಖ್ಯೆ ಜ್ಞಾಪನ ದಿನಾಂಕ:07-08-2022.

*****

2022-23ನೇ ಶೈಕ್ಷಣಿಕ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆಯನ್ನು ನಡೆಸಲು ಉಲ್ಲೇಖ-1, 2 ಹಾಗೂ 3ರ ಅಧಿಸೂಚನೆಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ 2022-23ನೇ ಶೈಕ್ಷಣಿಕ ಸಾಲಿನ ವರ್ಗಾವಣೆಗಾಗಿ ಆನ್-ಲೈನ್ ಅರ್ಜಿ ಸಲ್ಲಿಸಲು ಉಲ್ಲೇಖ-4ರಲ್ಲಿ ಆದೇಶಿಸಲಾಗಿರುತ್ತದೆ. ಅದರಂತೆ, ವಿವಿಧ ವಿಷಯಗಳ ಉಪನ್ಯಾಸಕರುಗಳು ಸಲ್ಲಿಸಲಾಗಿದ್ದ 3126 ಆನ್-ಲೈನ್ ಅರ್ಜಿಗಳನ್ನು ಪರಿಶೀಲಿಸಿ, ದಾಖಲೆಗಳ ಕೊರತೆಯಿಂದ ಹಾಗೂ ತಪ್ಪು ಆದ್ಯತೆಯಡಿ ಸಲ್ಲಿಸಲಾಗಿದ್ದ 377 ಅರ್ಜಿಗಳನ್ನು ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ಕಳುಹಿಸಿ, ಸದರಿ ಆಕ್ಷೇಪಣೆಗಳನ್ನು ಸರಿಪಡಿಸಿ ಅರ್ಹ ಮತ್ತು ಅನರ್ಹ ಅರ್ಜಿಗಳನ್ನು ಪರಿಶೀಲಿಸಿ ಸಲ್ಲಿಸುವಂತೆ ಉಲ್ಲೇಖ-5ರಂತೆ ಸೂಚಿಸಲಾಗಿತ್ತು.

ಅದರಂತೆ, ಜಿಲ್ಲಾ ಉಪ ನಿರ್ದೇಶಕರು, ಆಕ್ಷೇಪಿತವಾಗಿದ್ದ 377 ಅರ್ಜಿಗಳನ್ನು ಸಂಬಂಧಿಸಿದ ಉಪನ್ಯಾಸಕರು/ಪ್ರಾಂಶುಪಾಲರುಗಳಿಂದ ಪೂರಕ ಮಾಹಿತಿಯನ್ನು ಪಡೆದು ಅರ್ಹ/ ಅನರ್ಹ ಅರ್ಜಿಗಳನ್ನು ಪ್ರತ್ಯೇಕಿಸಿ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾ ಉಪ ನಿರ್ದೇಶಕರು ನೀಡಿರುವ ವರದಿಯನ್ವಯ 2796 + 42[MUTUAL] ಅರ್ಹ ಮತ್ತು 288 ಅನರ್ಹ ಪಟ್ಟಿಯನ್ನು ಪ್ರಕಟಿಸಿ,

ಪರಿಷ್ಕರಿಸಲಾದ ಅರ್ಹ ಮತ್ತು ಅನರ್ಹ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಸಂಬಂಧಿಸಿದ ಉಪನ್ಯಾಸಕರು, ಕಾಲೇಜಿನ ಪ್ರಾಂಶುಪಾಲರು ಹಾಗೂ ಜಿಲ್ಲಾ ಉಪ ನಿರ್ದೇಶಕರ ಮುಖೇನ ದಿನಾಂಕ: 08-08-2022ರ ಒಳಗಾಗಿ ಜಿಲ್ಲಾ ಉಪ ನಿರ್ದೇಶಕರ ಕಚೇರಿಯ ಸಿಬ್ಬಂದಿಯವರು ನಿರ್ದೇಶನಾಲಯಕ್ಕೆ ಮುದ್ದಾಂ ಸಲ್ಲಿಸಲು ಸೂಚಿಸಲಾಗಿತ್ತು. ಸದರಿ ಪಟ್ಟಿಗೆ ಬಂದಂತಹ ಆಕ್ಷೇಪಣೆಗಳನ್ನು ವರ್ಗಾವಣಾ ಅಧಿಸೂಚನೆಯ ನಿಯಮಗಳನ್ವಯ ಪರಿಶೀಲಿಸಿ, ಪರಿಗಣಿಸಲಾಗಿದೆ.

ಉಲ್ಲೇಖ-6ರಲ್ಲಿ, ಆದ್ಯತೆ ಮತ್ತು ಕೋರಿಕೆ ವರ್ಗಾವಣೆಯನ್ನು ನಡೆಸುವ ಸಲುವಾಗಿ ವಿವಿಧ ಆದ್ಯತೆಯಡಿಯಲ್ಲಿ ಹಾಗೂ ಸಾಮಾನ್ಯ ವರ್ಗದಲ್ಲಿ (ಆದ್ಯತೆ ಇಲ್ಲದಿರುವ) ಪರಿಗಣಿಸಲ್ಪಟ್ಟ ಉಪನ್ಯಾಸಕರುಗಳ ಅಂತಿಮ ಜೇಷ್ಠತಾ ಪಟ್ಟಿ, ವರ್ಗಾವಣಾ ವೇಳಾಪಟ್ಟಿ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳ ಮಾಹಿತಿಯನ್ನು ಪ್ರಕಟಿಸಲಾಗಿರುತ್ತದೆ. ವಿವಿಧ ಆದ್ಯತೆಯಡಿ ಕೋರಿಕೆ ವರ್ಗಾವಣೆಗೆ ಪರಿಗಣಿಸಲ್ಪಟ್ಟ ಉಪನ್ಯಾಸಕರುಗಳಿಗೆ ದಿನಾಂಕ: 08-08-2022 ರಂದು ಹಾಗೂ 'ಇತರೆ' ಆದ್ಯತೆಯಡಿಯಲ್ಲಿ ಕೋರಿಕೆ ವರ್ಗಾವಣೆಯಲ್ಲಿ ಮತ್ತು ಪರಸ್ಪರ ಕೋರಿಕೆ ವರ್ಗಾವಣೆಗೆ ಪರಿಗಣಿಸಲ್ಪಟ್ಟ ಉಪನ್ಯಾಸಕರುಗಳಿಗೆ ದಿನಾಂಕ: 10-08-2022 ಹಾಗೂ 11-08-2022 ರಂದು ಆನ್-ಲೈನ್ ಮೂಲಕ ಸ್ಥಳ ನಿಯುಕ್ತಿ ಕೌನ್ಸೆಲಿಂಗ್ ನಡೆಸಲಾಗಿರುತ್ತದೆ. ಸದರಿ ಆನ್-ಲೈನ್ ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವಿಷಯಗಳ ಉಪನ್ಯಾಸಕರುಗಳಿಗೆ ಈ ಪತ್ರದೊಂದಿಗಿನ ಅನುಬಂಧದಲ್ಲಿ ಅವರ ಹೆಸರಿನ ಮುಂದೆ ನಮೂದಿಸಲಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

**<u>ಷರತ್ತು:-</u>**

1. ವರ್ಗಾವಣೆ ಹೊಂದಿರುವ ಉಪನ್ಯಾಸಕರು ಈ ಆದೇಶ ಹೊರಡಿಸಿದ ದಿನಾಂಕದಿಂದ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ನಿಯಮ 78ರನ್ವಯ 10 ದಿನಗಳ ಒಳಗಾಗಿ ಕರ್ತವ್ಯದಿಂದ ಬಿಡುಗಡೆಗೊಂಡು, ವರ್ಗಾವಣೆಗೊಂಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು. ಕರ್ತವ್ಯದಿಂದ ಬಿಡುಗಡೆ/ವರದಿ ಮಾಡಿಕೊಳ್ಳದಿದ್ದವರ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
2. ಉಪನ್ಯಾಸಕರ ವರ್ಗಾವಣೆಯು ಆನ್-ಲೈನ್ ಕೌನ್ಸೆಲಿಂಗ್ ಮೂಲಕ ಆಗಿರುವುದರಿಂದ, ಸ್ಥಳ ನಿಯುಕ್ತಿಗೊಳಿಸಿರುವ ಕಾಲೇಜನ್ನು ಮಾರ್ಪಾಡುಗೊಳಿಸಲು ಅವಕಾಶ ಇರುವುದಿಲ್ಲ.